**1 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ,**
**ಪಾಂಡವಪುರ.**

ಪ್ರಸ್ತುತ: **ಶ್ರೀಮತಿ. ಪಾರ್ವತಮ್ಮ.ಬಿ.,**
ಬಿ.ಎ., ಎಲ್.ಎಲ್.ಎಂ.
**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ಪಾಂಡವಪುರ.**

ದಿನಾಂಕ :10 ನೇ ಅಕ್ಟೋಬರ್ - 2025

**ಅಸಲು ದಾವಾ ಸಂಖ್ಯೆ 347/2022**

**ವಾದಿ** : ಸರಸ್ವತಿ ಕೋಂಃ ಕೆ.ಬಸವೇಗೌಡ,
ಸುಮಾರು 54 ವರ್ಷ,
ವಾಸಃ ಅರಳುಕುಪ್ಪೆ ಗ್ರಾಮ, ಚಿನಕುರಳಿ ಹೋಬಳಿ,
ಪಾಂಡವಪುರ ತಾಲ್ಲೂಕು, ಮಂಡ್ಯ ಜಿಲ್ಲೆ.

(ವಾದಿ ಪರ ಶ್ರೀ.ಎಸ್.ಎನ್ .ಎಂ.,ವಕೀಲರು)

**ಃವಿರುದ್ಧ ಃ**

**ಪ್ರತಿವಾದಿ** : ಕೆ.ಬಸವೇಗೌಡ ಬಿನ್ ಲೇಟ್ ದೊಡ್ಡಕರೀಗೌಡ ,
ಸುಮಾರು 57 ವರ್ಷ,
ವಾಸಃ ಅರಳುಕುಪ್ಪೆ ಗ್ರಾಮ, ಚಿನಕುರಳಿ ಹೋಬಳಿ,
ಪಾಂಡವಪುರ ತಾಲ್ಲೂಕು, ಮಂಡ್ಯ ಜಿಲ್ಲೆ.

(ಪ್ರತಿವಾದಿ ಪರ ಶ್ರೀ.ಸಿ.ಎಸ್.ಎಸ್ ವಕೀಲರು)

**ಮಧ್ಯಂತರ ಅರ್ಜಿ ನಂ-IV**

ಅರ್ಜಿದಾರರು :
1. ಭಾಗ್ಯಲಕ್ಷ್ಮಿ ಬಿನ್ ಕೆ.ಬಸವೇಗೌಡ-ಪ್ರಸ್ತಾವಿತ ಅರ್ಜಿದಾರರು,
   ಸುಮಾರು 14 ವರ್ಷ ಅಪ್ರಾಪ್ತ.
2. ಬಿ.ದಾಯಾನಂದ ಬಿನ್ ಕೆ. ಬಸವೇಗೌಡ,
   ಸುಮಾರು 12 ವರ್ಷ ಅಪ್ರಾಪ್ತ ವಯಸ್ಕರು,

ಇವರ ಪರವಾಗಿ ಇವರ ನೈಸರ್ಗಿಕ ತಾಯಿ
ಮಂಗಳಮ್ಮ ಕೋಂ ಕೆ.ಬಸವೇಗೌಡ
ಸುಮಾರು 48 ವರ್ಷ, ವಾಸಃ ಅರಳುಕುಪ್ಪೆ ಗ್ರಾಮ,
ಚಿನಕುರಳಿ ಹೋಬಳಿ,ಪಾಂಡವಪುರ ತಾಲ್ಲೂಕು.

ः ವಿರುದ್ಧ ः
ಎದುರುದಾರರು : ಸರಸ್ವತಿ

| | |
|---|---|
| 1. Provision under which the application is filed | U/o 32 Rule 1 of CPC |
| 2. Relief sought for | Permission to file application on behalf of minor |
| 3.The date on which the application is filed | 03-08-2024 |
| 4. Number of the application | IA.No.IV |
| 5. The date on which the objections are filed by different opponents | Not filed |
| 6. The date on which the orders were passed on the said application | 10-10-2025 |

**(ಪಾರ್ವತಮ್ಮ.ಬಿ)**
**C/C 1 ನೇ ಅಪರ ಸಿವಿಲ್ ನ್ಯಾಯಾಲಯದಲ್ಲಿ**
**ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಪಾಂಡವಪುರ.**

**ದಿವಾನಿ ಪ್ರಕಿಯಾ ಸಂಹಿತೆ ಕ್ರಮಾದೇಶ 32 ನಿಯಮ 1 ಮಧ್ಯಂತರ ಅರ್ಜಿ ಸಂಖ್ಯೆ 4 ರ ಮೇಲೆ ಮಾಡಲಾದ ಆದೇಶ**

ಅರ್ಜಿದಾರರು, ಸಿವಿಲ್ ಪ್ರಕ್ರಿಯಾ ಸಂಹಿತೆ, ಕ್ರಮಾದೇಶ 32 ನಿಯಮ 1 ರ ಅಡಿಯಲ್ಲಿ ಮಧ್ಯಂತರ ಅರ್ಜಿ-4 ನ್ನು ಸಲ್ಲಿಸಿ, ಈ ಪ್ರಕರಣದ 2 ಮತ್ತು 3 ನೇ ಈ ಅರ್ಜಿಯಲ್ಲಿ ಪ್ರತಿವಾದಿಗಳನ್ನಾಗಿ ಸೇರ್ಪಡೆಗೊಳಿಸಿ ಅವರ ಪರ ಅವರ ನೈಸರ್ಗಿಕ ತಾಯಿ ಪ್ರಕರಣವನ್ನು ನಡೆಸಲು ಅನುಮತಿ ನೀಡಿ ಪ್ರಕರಣವನ್ನು ಗುಣಾವುಗುಣಗಳ ಮೇಲೆ ತೀರ್ಪು ನೀಡಬೇಕೆಂದು ನ್ಯಾಯಾ ಮತ್ತು ಸಮಾನತೆ ದೃಷ್ಟಿಯಿಂದ ಕೋರಿಕೊಂಡಿರುತ್ತಾರೆ.

**2.** ಮಧ್ಯಂತರ ಅರ್ಜಿ ನಂ. 4 ರ ಪ್ರಮಾಣ ಪತ್ರವನ್ನು ಪರಿಶೀಲಿಸಲಾಯಿತು.

**3.** ಅರ್ಜಿದಾರರ ಅರ್ಜಿಯ ಮೇಲೆ ಈ ಕೆಳಗಿನ ಅಂಶಗಳು ನಿರ್ಣಯಕ್ಕೆ ಉದ್ಭವಿಸಿರುತ್ತದೆ.

<u>ಅಂಶಗಳು</u>

**1.** ಅರ್ಜಿದಾರರ ಮಧ್ಯಂತರ ಅರ್ಜಿ ನಂ.3 ರಲ್ಲಿ ಕೇಳಿಕೊಂಡಂತೆ ಪರಿಹಾರವನ್ನು ಪಡೆದುಕೊಳ್ಳಲು ಸಾಕಷ್ಟು ಕಾರಣಗಳನ್ನು ಒದಗಿಸಿರುತ್ತಾರೆಯೇ ?

**2.** ಯಾವ ಆದೇಶ **?**

**4.** ಮೇಲಿನ ಅಂಶಕ್ಕೆ ಈ ಕೆಳಗಿನಂತೆ ನ್ಯಾಯಾಲಯದ ಉತ್ತರಃ

| | | |
|---|---|---|
| ಅಂಶ ನಂ.1 | ಃ | ನಕಾರಾತ್ಮಕವಾಗಿ |
| ಅಂಶ ನಂ.2 | ಃ | ಅಂತಿಮ ಆದೇಶದಂತೆ ಈ ಕೆಳಕಂಡ ಕಾರಣಗಳು |

<u>ಕಾರಣಗಳು</u>

**5.** **<u>ಅಂಶ ನಂ.1ಃ-</u>** ವಾದಿ ಸರಸ್ವತಿ ರವರು 1 ನೇ ಪ್ರತಿವಾದಿಯ ಮೊದಲನೆ ಪತ್ನಿಯಾಗಿರುತ್ತಾರೆ. ನಾನು 1 ನೇ ಪ್ರತಿವಾದಿಯ 2 ನೇ ಪತ್ನಿಯಾಗಿರುತ್ತೇನೆ. ಪ್ರಸ್ತಾವತಿ ಪ್ರತಿವಾದಿ 2 ಮತ್ತು 3 ರವರುಗಳು ಅಂದರೆ, ಭಾಗ್ಯಲಕ್ಷ್ಮಿ ಮತ್ತು ದಯಾನಂದ ಇವರುಗಳು ನನ್ನ ಹಾಗೂ 1 ನೇ ಪ್ರತಿವಾದಿ ಬಸವೇಗೌಡರ ಮಕ್ಕಳುಗಳಾಗಿರುತ್ತಾರೆ. ವಾದಿ ಮತ್ತು 1 ನೆ ಪ್ರತಿವಾದಿಯ ವಿವಾಹವು 1988 ನೇ ಸಾಲಿನಲ್ಲಿ ಏರ್ಪಟ್ಟಿದ್ದು, ಅವರ ವೈವಾಹಿಕ ಜೀವನದಿಂದ ಸುಮಾರು 12 ವರ್ಷಗಳ ವರೆವಿಗೂ ಮಕ್ಕಳುಗಳು ಆಗದ ಕಾರಣ ವಂಶಭಿವೃದ್ಧಿಗಾಗಿ ಎಂದು ವಾದಿಯೆ ಮುಂದೆನಿಂತು ನನ್ನ ಹಾಗೂ 1 ನೇ ಪ್ರತಿವಾದಿಯ ಮಧುವೆಯನ್ನು ನೆರವೇರಿಸಿರುತ್ತಾರೆ. ನನ್ನ ಹಾಗೂ 1 ನೇ ಪ್ರತಿವಾದಿಯ ವಿವಾಹದ ಸಂಬಂಧದಿಂದ ಮೇಲ್ಕಂಡ ಪ್ರಾಸ್ತಾವಿತ ಪ್ರತಿವಾದಿ 2 ಮತ್ತು 3 ರವರ ಜನನವಾಗಿರುತ್ತದೆ. ವಾದಿ 1 ನೇ ಪ್ರತಿವಾದಿ ಹಾಗೂ ನಾನು ಮತ್ತು ಪ್ರಸ್ತಾವಿತ ಪ್ರತಿವಾದಿಯರೆಲ್ಲರೂ ಪರಸ್ಪರ ಅನ್ಯೂನತೆಯಿಂದ ಒಂದೇ ಕುಟುಂಬದಲ್ಲಿ ಇದ್ದುಕೊಂಡು ವಾಸಮಾಡಿಕೊಂಡು ಬಂದಿರುತೇವೆ ಆದರೆ ವಾದಿಯು ಇತ್ತೀಚೆಗೆ ಸಣ್ಣಪುಟ್ಟ ಕಾರಣಗಳಿಗಾಗಿ ಒಂದನೇ ಪ್ರತಿವಾದಿಯ ಜೋತೆ ಷರಿಕ್ ಆಗಿ ನನ್ನ ಮಕ್ಕಳ ಪಾಲನೆ ಮತ್ತು ಪೋಷಣೆಯನ್ನು ನಿರ್ಲಕ್ಷಿಸಿರುವುದಲ್ಲದೆ. ಪ್ರಸ್ತಾವಿತ ಪ್ರತಿವಾಧಿಗಳಿಗೆ ದಾವಾ ಸ್ವತ್ತುಗಳಲ್ಲಿ ಅವರುಗಳಿಗೆ ಬರಬೇಕಾದ ಭಾಗಾಂಶದ ಹಕ್ಕನ್ನು ತಪ್ಪಿಸುವ ಸಲುವಾಗಿ ವಾದಿ ಮತ್ತು 1 ನೇ ಪ್ರತಿವಾದಿಯರು ಪರಸ್ಪರ ಶಾಮೀಲಾಗಿ ಈ ದಾವೆಯನ್ನು ಸಲ್ಲಿಸಿರುತ್ತಾರೆ.

ದಾವಾ ಸ್ವತ್ತುಗಳು ಒಟ್ಟು ಕುಟುಂಬದ ಸ್ವತ್ತುಗಳಾಗಿದ್ದು, ಪ್ರಸ್ತಾವಿತ ಪ್ರತಿವಾದಿಯರು 1 ನೇ ಪ್ರತಿವಾದಿಯ ಕಾನೂನು ಬದ್ಧವಾರಸುದಾರರಾಗಿದ್ದು ದಾವಾ ಸ್ವತ್ತುಗಳಲ್ಲಿ ಭಾಗಾಂಶದ ಹಕ್ಕು ಇರುತ್ತದೆ. ಆದರೆ ವಾದಿ ಮತ್ತು 1 ನೇ ಪ್ರತಿಯು ಪ್ರಸ್ತಾವಿತ ಪ್ರತಿವಾದಿಯರಿಗೆ ಮೋಸ ಮಾಡುವ ಉದ್ದೇಶದಿಂದ

ದಾವಾ ಸ್ವತ್ತುಗಳ ಮೇಲೆ ಋಣ ಭಾರಕ್ಕೆ ಒಳಪಡಿಸುವಂತೆ ಕೋರಿ ದಾವೆ ಸಲ್ಲಿಸಿರುವುದು ವಸ್ತಸ್ಥಿತಿ ಹಾಗೂ ಕಾನೂನಿನ ಸಂಗತಿಗಳ ಮೇಲೆ ಅನೂರ್ಜಿತವಾಗಿರುತ್ತದೆ. ಈ ಬಗ್ಗೆ ನಾನು ವಾದಿ ಮತ್ತು ಪ್ರತಿವಾದಿಯರನ್ನು ದಾವಾ ಷೆಡ್ಯೂಲ್ ಸ್ವತ್ತುಗಳಲ್ಲಿ ಪ್ರಸ್ತಾವಿತ ಪ್ರತಿವಾದಿಯರಿಗೆ ಬರಬೇಕಾದ ಭಾಗಾಂಶವನ್ನು ಪ್ರತ್ಯೇಕಗೊಳಿಸಿ. ಸ್ವಾದೀನಕ್ಕೆ ನೀಡುವಂತೆ ಕೋರಿಕೊಂಡರು ಸಹ ಯಾವುದೇ ಪ್ರಯೋಜನವಾಗಿರುವುದಿಲ್ಲ. ಆದರೆ ಇತ್ತೀಚೆಗೆ ವಾದಿ ಮತ್ತು ಪ್ರತಿವಾದಿಯರು ಪರಸ್ಪರ ಶಾಮೀಲಾಗಿ ಈ ದಾವೆ ಸಲ್ಲಿಸಿರುವುದು ನನ್ನ ಗಮನಕ್ಕೆ ಬಂದ್ದ ಕಾರಣ ತಾನು ಪ್ರಸ್ತಾವಿತ ಪ್ರತಿವಾದಿಯರ ಪರ ಈ ಅರ್ಜಿಯನ್ನು ಸಲ್ಲಿಸಿರುತ್ತಾರೆ.

ಪ್ರಸ್ತಾವಿತ ಪ್ರತಿವಾದಿಯರ ಭಾಗಕ್ಕೆ ಬರುವ ಸ್ವತ್ತುಗಳ ಮೇಲೆ ವಾದಿಯು ಋಣ ಭಾರದ ಭಾಧ್ಯತೆಯನ್ನು ಬದ್ದಗೊಳಿಸಿದರೆ, ಪ್ರಸ್ತಾವಿತ ಪ್ರತಿವಾದಿಯರ ಭಾಗಾಂಶಕ್ಕೆ ಬರುವ ಸ್ವತ್ತುಗಳ ಮೇಲೆ ವ್ಯವಹಾರಿಕವಾಗಿ ತೊಂದರೆ ಉಂಟಾಗುತ್ತದೆ, ಆ ಕಾರಣ ಸದರಿ ದಾವಾ ಸ್ವತ್ತುಗಳಿಗೆ ಸಂಭಂದಿಸಿದಂತೆ ಪ್ರಸ್ತಾವಿತ ಪ್ರತಿವಾದಿಗಳು ಪ್ರತ್ಯೇಕವಾದ ಭಾಗಾಂಶ ಕೋರಿ ದಾವೆ ಸಲ್ಲಿಸುವವರಿದ್ದಾರೆ ಅಲ್ಲದೆ 1 ನೇ ಪ್ರತಿವಾದಿಯ ಭಾಗಕ್ಕೆ ಬರುವ ಭಾಗಾಂಶದ ಸ್ವತ್ತಿನ ಮೇಲ ಋಣಭಾರವನ್ನು ಕೋರಲು ವಾದಿಗೆ ಹಕ್ಕಿರುತ್ತದೆ. ಆದುದರಿಂದ ಈ ಪ್ರಕರಣದಲ್ಲಿ ಪ್ರಸ್ತಾವಿತ ಪ್ರತಿವಾದಿ-2 ಮತ್ತು 4 ರವರುಗಳ ಪರವಾಗಿ ಅವರ ನೈಸರ್ಗಿಕ ತಾಯಿಯಾದ ತನ್ನನ್ನು ಪ್ರಕರಣವನ್ನು ನಡೆಸಲು ಅನುಮತಿ ನೀಡಿ ಪ್ರಕರಣವನ್ನು ಗುಣಾವುಗುಣಗಳ ಮೇಲೆ ತೀರ್ಪು ನೀಡಬೇಕಾಗಿ ಕೋರಿಕೊಂಡಿರುತ್ತಾರೆ.

**6.** ವಾದಿಯು ಸದರಿ ಅರ್ಜಿಗೆ ತಕರಾರನ್ನು ಸಲ್ಲಿಸಿರುವುದಿಲ್ಲ. ಈಗಾಗಲೇ ಮಧ್ಯಂತರ ಅರ್ಜಿ ಸಂ.3 ರಲ್ಲಿ ಪ್ರಸ್ತುತ ದಾವೆ ಮತ್ತು ಅರ್ಜಿಗಳ ಮೇಲೆ ನ್ಯಾಯಾಲಯವು ಅಭಿಪ್ರಾಯಕ್ಕೆ ಬಂದಿದ್ದು, ಅದರಂತೆ ವಾದಿಯು ಸಲ್ಲಿಸಿರುವ ವ್ಯಾಜ್ಯ ಕಾರಣ ಮತ್ತು ದಾವಾ ಪರಿಹಾರಕ್ಕೂ, ಅರ್ಜಿದಾರನು ಸಲ್ಲಿಸಿರುವ ಪ್ರಮಾಣ ಪತ್ರಗಳ ಅಂಶಗಳಿಗೂ ಒಂದಕ್ಕೊಂದು ಸಂಬಂಧ ಇರುವುದಿಲ್ಲ. ಪ್ರಸ್ತುತ ದಾವೆಯಲ್ಲಿ ವಾದಿಯು ಜೀವನಾಂಶದ ಹಕ್ಕನ್ನು ಪ್ರತಿವಾದಿ ಬಸವೇಗೌಡರ ವಿರುದ್ಧ ಕೋರಿದ್ದು, ಜೀವನಾಂಶದ ಮೊತ್ತಕ್ಕೆ ಷೆಡ್ಯೂಲ್ ಸ್ವತ್ತುಗಳನ್ನು ಋಣಭಾರವಾಗಿ ಬದ್ದಪಡಿಸುವಂತೆ ಕೋರಿರುತ್ತಾರೆ. ಪ್ರಸ್ತುತ ಜೀವನಾಂಶದ ಹಕ್ಕಿನ ದಾವೆಯಲ್ಲಿ ವಾದಿ ಮತ್ತು ಪ್ರತಿವಾದಿ ಮಾತ್ರ ಅಗತ್ಯ ಪಕ್ಷಗಾರರಾಗಿದ್ದು, ಅರ್ಜಿದಾರರು ಸಹ ಅಗತ್ಯ ಪಕ್ಷಗಾರರು ಎಂದು ತೋರಿಸಲು ಯಾವುದೇ ಸಮಂಜಸ ಕಾರಣ ತೋರ್ಪಡಿಸಿಲ್ಲ. ಬಹುಮುಖ್ಯವಾಗಿ ವಾದಿಯು ಪ್ರತಿವಾದಿಯ ಹೆಂಡತಿ ಎಂಬುದು ಒಪ್ಪಿತ ಸಂಗತಿಯಾಗಿದೆ. ಪ್ರತಿವಾದಿಯು ಆಕೆಗೆ ಜೀವನಾಂಶದ ಹಕ್ಕನ್ನು ಕೊಡಲು ಸಹ ಬದ್ದನಾಗಿದ್ದು, ಅದು ನ್ಯಾಯಾಲಯದಲ್ಲಿ ಗುಣಾಂಶಗಳ ಮೇಲೆ ತೀರ್ಮಾನವಾಗಬೇಕಾದ ಅಂಶವಾಗಿದೆ. ಪ್ರಸ್ತುತ

ಪ್ರಕರಣವೂ ವಾದಿಯ ವಿಚಾರಣೆಗೆ ಹೋದಾಗ, ಪ್ರಸ್ತಾವಿತ ಅರ್ಜಿದಾರರು ಅರ್ಜಿ ಸಲ್ಲಿಸಿರುತ್ತಾರೆ. ಪ್ರಸ್ತುತ ದಾವೆಯಲ್ಲಿನ ವ್ಯಾಜ್ಯ ಕಾರಣವೂ ಕೇವಲ ಪ್ರತಿವಾದಿಯ ಮೇಲೆ ಪರಿಹಾರ ಕೇಳಲು ಮಾತ್ರ ಯೋಗ್ಯವಾಗಿರುತ್ತದೆ. ಅರ್ಜಿದಾರರ ವಿರುದ್ಧ ವಾದಿ ಸರಸ್ವತಿಗೆ ಪರಿಹಾರ ಕೇಳಲು ಯಾವುದೇ ವ್ಯಾಜ್ಯ ಕಾರಣ ಇರುವುದಿಲ್ಲ. ಈ ಕಾರಣದಿಂದ ಅರ್ಜಿದಾರರನ್ನು ಪ್ರಸ್ತಾಪಿತ ಪ್ರತಿವಾದಿಗಳನ್ನಾಗಿ ಸೇರಿಸಿಕೊಳ್ಳಲು ಈ ದಾವೆಯಲ್ಲಿ ಅವರ ಅವಶ್ಯಕತೆ ಇರುವುದಿಲ್ಲವೆಂದು ನ್ಯಾಯಾಲಯವೂ ತೀರ್ಮಾನಿಸಿರುತ್ತದೆ. ಉದ್ದೇಶಿತ ಅರ್ಜಿದಾರ / ಪ್ರತಿವಾದಿ-2 ಮತ್ತು 3 ಈ ದಾವೆಯ ನ್ಯಾಯಯುತ ನಿರ್ಣಯಕ್ಕೆ ಅವಶ್ಯಕ ಪಕ್ಷಗಾರನಾಗಿರುವುದಿಲ್ಲ ಮತ್ತು ನ್ಯಾಯಾಲಯದ ತೀರ್ಪಿಗೂ ಸಹಾಯಕಾರಿಯಾಗಿರುವುದಿಲ್ಲ. ಅರ್ಜಿದಾರನ ಅರ್ಜಿಯನ್ನು ತಿರಸ್ಕರಿಸಿದ್ದಲ್ಲಿ, ಅವರಿಗೆ ಯಾವುದೇ ತೊಂದರೆ ಉಂಟಾಗುವುದಿಲ್ಲ. ಅವರು ತಮ್ಮ ಹಕ್ಕಿನ ಪರಿಹಾರಕ್ಕೆ ಪ್ರತಿವಾದಿಯ ವಿರುದ್ಧ ದಾವೆಯನ್ನು ಹೂಡಲು ಹಕ್ಕುಳವರಾಗಿರುತ್ತಾರೆ. ಆದರೆ ಪ್ರಸ್ತುತ ದಾವೆಯಲ್ಲಿ ಅವರಿಗೆ ಯಾವುದೇ ಹಕ್ಕು ಇರುವುದಿಲ್ಲ. ಮಧ್ಯಂತರ ಅರ್ಜಿ -3 ವಜಾಗೊಂಡಿದ್ದು, ಪ್ರಸ್ತುತ ಮಧ್ಯಂತರ ಅರ್ಜಿ ಸಂ.4 ಊರ್ಜಿತಗೊಂಡಿಲ್ಲ. ಅರ್ಜಿದಾರರೇ ನ್ಯಾಯಾಲಯದಲ್ಲಿ ಅಗತ್ಯ ಪಕ್ಷಗಾರರಲ್ಲವೆಂದು ತೀರ್ಮಾನಿಸಿದ್ದು, ಅವರ ಪರವಾಗಿ ನೈಸರ್ಗಿಕ ತಾಯಿಯನ್ನು ನೇಮಕ ಮಾಡಿ ಈ ನ್ಯಾಯಾಲಯದಿಂದ ನೇಮಿಸುವ ಪ್ರಶ್ನೆಯೇ ಉದ್ಭವಿಸುವುದಿಲ್ಲವೆಂದು ಅಭಿಪ್ರಾಯಿಸುತ್ತಾ ಮಧ್ಯಂತರ ಅರ್ಜಿ -4 ವಜಾಗೊಳ್ಳಲು ಅರ್ಹವೆಂದು ತೀರ್ಮಾನಿಸಲಾಗಿದೆ. **ಮೇಲೆ ಚರ್ಚಿತ ಅಂಶಗಳಿಂದ ಅಂಶ-1 ನ್ನು ನಕಾರಾತ್ಮಕವಾಗಿ ಉತ್ತರಿಸಲಾಗಿದೆ.**

**7. <u>ಅಂಶ-2ಃ</u>** ಅಂಶ 1 ರಲ್ಲಿ ವಿವರಿಸಿದ ಕಾರಣಗಳ ಸಹಿತ ಈ ಕೆಳಗಿನಂತೆಃ

## <u>ಆದೇಶ</u>

ಅರ್ಜಿದಾರರು ದಿವಾಣಿ ಪ್ರಕ್ರಿಯಾ ಸಂಹಿತೆ ಕ್ರಮಾದೇಶ-32 ನಿಯಮ-1 ರ ಅಡಿಯಲ್ಲಿ ಸಲ್ಲಿಸಿರುವ ಮಧ್ಯಂತರ ಅರ್ಜಿ-4 ನ್ನು ವಜಾಗೊಳಿಸಲಾಗಿದೆ.

(ಶೀಘ್ರಲಿಪಿಗಾರಳಿಗೆ ಉಕ್ತಲೇಖನ ನೀಡಿದ್ದು, ಸದರಿಯವರು ಬೆರಳಚ್ಚು ಮಾಡಿದ ನಂತರ ಓದಿ ಪರಿಶೀಲಿಸಿ, ಪರಿಷ್ಕರಿಸಿ ತೆರೆದ ನ್ಯಾಯಾಲಯದಲ್ಲಿ ಇಂದು ದಿನಾಂಕ: 10 ನೇ ಅಕ್ಟೋಬರ್ -2025 ರಂದು ಸದರಿ ಆದೇಶವನ್ನು ಘೋಷಿಸಲಾಗಿದೆ.)

**(ಪಾರ್ವತಮ್ಮ.ಬಿ)**
**C/C 1** ನೇ **ಅಪರ ಸಿವಿಲ್ ನ್ಯಾಯಾಲಯದಲ್ಲಿ**
**ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಪಾಂಡವಪುರ.**